

ಪಂಚ ಪಾಂಡವರೆಂದು ಸಾಂಸ್ಕೃತಿಕ ವಲಯದಲ್ಲಿ ಪ್ರಸಿದ್ಧರಾದ ಎಂ.ಎಂ. ಕಲಬುರ್ಗಿ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ ಹಾಗೂ ಗಿರಡ್ಡಿ ಗೋವಿಂದರಾಜ

ಅಭ್ಯಾಸವಾಗಿತ್ತು. ಪಿಎಂ ತನಗೆ ಬೇಕಿದ್ದ ಅಲಭ್ಯ ಪುಸ್ತಕಗಳನ್ನು ತರಿಸಲು ಆದೇಶ ಕೊಡುತ್ತಿದ್ದ. ಶಿವಲಿಂಗಯ್ಯ ಆಗಿಂದಾಗ ಬರೆದುಕೊಂಡು ಅದರ ವ್ಯವಸ್ಥೆ ಮಾಡುತ್ತಿದ್ದರು. ಅವರ ಅಂಗಡಿಯಲ್ಲಿ ನಾವು ಉದ್ರಿ ಖಾತೆಯನ್ನೂ ಇಟ್ಟುಕೊಂಡಿದ್ದೆವು. ತಿಂಗಳಿಗೊಮ್ಮೆ ತಪ್ಪದೇ ಹಣ ಕೊಡುತ್ತಿದ್ದೆವು. ಆದರೂ ನಾವು ಅಲ್ಲಿ ಹೋದ ಕೂಡಲೇ ಶಿವಲಿಂಗಯ್ಯ ನಮ್ಮ ಉದ್ರಿಯ ಬಗ್ಗೆ ನೆನಪಿಸುವ ಪರಿಪಾಟ ಇಟ್ಟುಕೊಂಡಿದ್ದರು. ಅದನ್ನು ಕೇಳಿ ಕೇಳಿ ನಮಗೆ ಅಭ್ಯಾಸವಾಗಿತ್ತು. ಆದರೆ, ಗಿರಡ್ಡಿಗೆ ಅವರ ಆ ಸ್ವಭಾವ ಸೇರುತ್ತಿದ್ದಿಲ್ಲ. ಹೀಗಾಗಿ ಟಿ.ಡಿ. ಶಿವಲಿಂಗಯ್ಯ ಅವರಿಗೆ ಅವನು 'ಟೀಡಿಯೆಸ್' ಅನ್ನುತ್ತಿದ್ದ. ಬಹಳ ಕಾಲದವರೆಗೆ ಅದನ್ನು 'ಟಿ.ಡಿ.ಎಸ್.' ಎಂದು ಸಂಕ್ಷಿಪ್ತವಾಗಿ ಹೇಳುತ್ತಿದ್ದಾನೆ ಅಂದುಕೊಂಡಿದ್ದ ನನಗೆ, ಅದು ಬೇಸರ ಪಡಿಸುವ ಶಿವಲಿಂಗಯ್ಯನವರ 'ಟೀಡಿಯೆಸ್ ಸ್ವಭಾವದ ಟೀಕೆ' ಎಂದೇ ಗೊತ್ತಾಗಿರಲಿಲ್ಲ. ನಾನು ತಿಳಿದ ಮಟ್ಟಿಗೆ ಆ ಅಂಗಡಿ ಇರುವ ವರೆಗೂ ಅವರ ಸಂಪರ್ಕ ಇಟ್ಟುಕೊಂಡು ಅಲ್ಲಿ ಬಹಳಷ್ಟು ಹೊಸ ಪುಸ್ತಕಗಳನ್ನು ಕೊಂಡವರು ಪಿ.ಎಂ. ಹೆಗಡೆ ಮತ್ತು ನಾನು. ಶಿವಲಿಂಗಯ್ಯನವರ ಸ್ನೇಹ, ಸಂಬಂಧದಿಂದಾಗಿ ಧಾರವಾಡಕ್ಕೆ ಬರುವ ಬಹುತೇಕ ಎಲ್ಲ ಪ್ರಸಿದ್ಧ ಸಾಹಿತಿಗಳು ಅವರಲ್ಲಿಗೆ ಬರುತ್ತಿದ್ದರು. ಶಿವಲಿಂಗಯ್ಯ ಅಂಥವರನ್ನು ನಮಗೆ ವಿಶೇಷವಾಗಿ ಪರಿಚಯ ಮಾಡಿಕೊಡುತ್ತಿದ್ದರು. ಸಿದ್ಧಯ್ಯ ಪುರಾಣಿಕ, ತ.ರಾ.ಸು ಮುಂತಾದವರನ್ನು ನಾವು ಪರಿಚಯಿಸಿಕೊಂಡಿದ್ದು ಸಾಹಿತ್ಯಮಂದಿರದಲ್ಲಿಯೇ.

ಇಂಟರ್ ಮುಗಿದ ಅನಂತರ ನಾವು ಎರಡು ವರ್ಷದ ಅಧ್ಯಯನಕ್ಕೆ ಕಂಪಲ್ಸರಿ ಇಂಗ್ಲಿಷ್ ಅಲ್ಲದೇ, ಪ್ರಿನ್ಸಿಪಲ್ ಮತ್ತು ಸಬ್‌ಸಿಡಿಯರಿ ಎಂದು ವಿಷಯಗಳನ್ನು ಆಯ್ದುಕೊಳ್ಳಬೇಕಾಗುತ್ತಿತ್ತು. ನಾವು ಮೂವರೂ ಇಂಗ್ಲಿಷ್ ತೆಗೆದುಕೊಂಡೆವು. ಪಿಎಂನಿಗೆ ಇಂಗ್ಲಿಷ್ ಚೆನ್ನಾಗಿ ಬರುತ್ತಿತ್ತು, ಗಿರಡ್ಡಿಗೆ ಕಠಿಣವೆನಿಸಿದರೂ ಇಂಗ್ಲಿಷ್‌ನ್ನು ಕಲಿಯುವ ಮನಸ್ಸಿತ್ತು. ನನಗೆ ಹಿಂದೀ ಕಲಿಯುವ ಮನಸ್ಸಿತ್ತು. ಆದರೆ, ಆ ವಿಷಯಕ್ಕೆ ಅದುವರೆಗೆ ಪ್ರಿನ್ಸಿಪಲ್ ಸಬ್ಜೆಕ್ಟ್ ಎಂದು ಮಾನ್ಯತೆ ಸಿಕ್ಕಿರಲಿಲ್ಲ. ಹೀಗಾಗಿ, ನಾನು ಅವರಂತೆಯೇ ಪ್ರಿನ್ಸಿಪಲ್ ಮತ್ತು ಸಬ್‌ಸಿಡಿಯರಿ ಎರಡೂ ಹಂತದಲ್ಲಿ ಇಂಗ್ಲಿಷ್ ತೆಗೆದುಕೊಂಡೆ. ಆ ಸಮಯದಲ್ಲಿ ಇಬ್ಬರೂ ಗೆಳೆಯರು ಕ್ಲಾಸಿನಲ್ಲಿ ಅತ್ಯಂತ ಗಂಭೀರವಾಗಿ ಎಲ್ಲ ಪ್ರೊಫೆಸರರು ಕಲಿಸಿದ್ದುದರ ನೋಟ್ಸ್ ಬರೆದುಕೊಳ್ಳುತ್ತಿದ್ದರು. ಅವರಷ್ಟು ಗತಿ ಮತ್ತು ಭಾಷಾಜ್ಞಾನ ನನಗೆ ಸಾಧ್ಯವಾಗುತ್ತಿರಲಿಲ್ಲ.